ಕಡಿಮೆಯೂ ಅಲ್ಲ. ಯಾವುದೂ ಮೊದಲ ಪುಟವಲ್ಲ, ಯಾವುದೂ ಕೊನೆಯ ಪುಟವೂ ಅಲ್ಲ. ಆ ಪುಟಗಳಿಗೆ ಯಾಕೆ ಯಾವುದೇ ಕ್ರಮವಿಲ್ಲದೆ ಸಂಖ್ಯೆಗಳನ್ನು ಹಾಕಿದ್ದರೋ ನನಗೆ ಗೊತ್ತಿಲ್ಲ. ಬಹುಶಃ ಅಪರಿಮಿತವಾದದ್ದು ಯಾವುದೇ ಸಂಖ್ಯೆಯನ್ನು ಅಂಗೀಕರಿಸುತ್ತದೆಯೆಂದು ಸೂಚಿಸುವುದಕ್ಕಾಗಿಯೋ ಏನೊ.

ಆಮೇಲೆ ಅವನು ಏನೋ ಗಾಢವಾಗಿ ಯೋಚಿಸುತ್ತಿರುವವನಂತೆ ಹೇಳಿದ: “ಅವಕಾಶ ಅಪರಿಮಿತವಾಗಿದ್ದರೆ ನಾವು ಅವಕಾಶದಲ್ಲಿ ಯಾವುದೇ ಬಿಂದುವಿನಲ್ಲಿರಬಹುದು. ಕಾಲ ಅಪರಿಮಿತವಾಗಿದ್ದರೆ ನಾವು ಕಾಲದಲ್ಲಿ ಯಾವುದೇ ಬಿಂದುವಿನಲ್ಲಿರಬಹುದು.”

ಅವನ ಊಹಾಪೋಹದಿಂದ ನನಗೆ ಕಿರಿಕಿರಿಯಾಯಿತು. “ನೀವು ಧರ್ಮಭೀರು. ಸಂಶಯವೇ ಇಲ್ಲ” ಎಂದೆ.

“ಹೌದು, ನಾನೊಬ್ಬ ಪ್ರೆಸ್ಬಿಟೇರಿಯನ್. ನನ್ನ ಮನಃಸಾಕ್ಷಿ ಸ್ಪಷ್ಟವಾಗಿದೆ. ಆ ಮನುಷ್ಯನ ರಾಕ್ಷಸ ಪುಸ್ತಕಕ್ಕೆ ಬದಲಿಯಾಗಿ ದೇವರ ಸುವಾರ್ತೆಯನ್ನು ಕೊಡುವ ಮೂಲಕ ನಾನೇನೂ ಅವನಿಗೆ ಮೋಸಮಾಡಲಿಲ್ಲವೆಂದು ನನಗೆ ಸ್ಪಷ್ಟವಾಗಿ ಗೊತ್ತು.”

